# ಸಮಗ್ರ ಶಿಕ್ಷಣ ಕರ್ನಾಟಕ

## ರಾಜ್ಯ ಯೋಜನಾ ನಿರ್ದೇಶಕರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು -01

ದಿನಾಂಕ: 11-01-2023

ಸಂಖ್ಯೆ: ಸಶಿಕ /IE/ತ.ಸಾ.ಭಾ/DSERT/01/2022-23

## ಸುತ್ತೋಲೆ

ವಿಷಯ: NISHTHA 4.0 ರಲ್ಲಿ ಲಭ್ಯವಿರುವ ಸಮನ್ವಯ ಶಿಕ್ಷಣ/ ಒಳಗೊಳ್ಳುವ ಶಿಕ್ಷಣದ ಮಾಡ್ಯೂಲ್ ಬಳಸಿಕೊಂಡು ರಾಜ್ಯದ ಎಲ್ಲಾ ಶಿಕ್ಷಕರು ಮತ್ತು ವಿಶೇಷ ಸಂಪನ್ಮೂಲ ಶಿಕ್ಷಕರು ತರಬೇತಿ ಪಡೆದುಕೊಳ್ಳುವ ಕುರಿತು.

ಉಲ್ಲೇಖ: ದಿನಾಂಕ: 25.03.2022 ರಂದು ಮಾನ್ಯ ರಾಜ್ಯ ಯೋಜನಾ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದ್ದ ಸಭೆಯ ನಡವಳಿಯಂತೆ.

********

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ನಡವಳಿಯಂತೆ, CWSN ಮಕ್ಕಳು ಇತರೆ ಮಕ್ಕಳಂತೆ ಗುಣಾತ್ಮಕ ಶಿಕ್ಷಣವನ್ನು ಪಡೆಯುವ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಶಿಕ್ಷಕರು ಮತ್ತು ವಿಶೇಷ ಸಂಪನ್ಮೂಲ ಶಿಕ್ಷಕರಿಗೆ ಸಮನ್ವಯ ಶಿಕ್ಷಣ ತರಬೇತಿ ನೀಡುವ ಅಗತ್ಯತೆ ಇರುತ್ತದೆ. NEP 2020 ಅಧ್ಯಾಯ (6) ರ ಪ್ರಕಾರ ಶಾಲಾ ಶಿಕ್ಷಣದಲ್ಲಿ ಲಭ್ಯತೆ, ಭಾಗವಹಿಸುವಿಕೆ ಮತ್ತು ಕಲಿಕಾ ಸಾಮಾಜಿಕ ಅಂತರವನ್ನು ಸರಿಪಡಿಸುವ ನಿಟ್ಟಿನಲ್ಲಿ ಎಲ್ಲಾ ಶಿಕ್ಷಕರು ಮತ್ತು ವಿಶೇಷ ಸಂಪನ್ಮೂಲ ಶಿಕ್ಷಕರಿಗೆ ತರಬೇತಿ ನೀಡಲು ತಿರ್ಮಾನವಾಗಿರುತ್ತದೆ.

ಸಮಗ್ರ ತರಬೇತಿಯನ್ನು UNICEF ಸಹಯೋಗದಲ್ಲಿ ನೀಡಲು ಯೋಜಿಸಿ ಸದರಿ ತರಬೇತಿಗೆ ಸಂಬಂಧಿಸಿದ ಮಾಡ್ಯೂಲ್‌ಗಳನ್ನು ಮತ್ತು ಇದಕ್ಕೆ ಅಗತ್ಯವಿರುವ Technical Input ಅನ್ನು CBR network ರವರಿಂದ ಪಡೆಯಲಾಗಿದೆ. ಮಾಡ್ಯೂಲ್‌ಗಳೊಂದಿಗೆ ಅಗತ್ಯವಿರುವ ಮಲ್ಟಿ ಮೀಡಿಯಾ ಪರಿವರ್ತನಾ ಚಟುವಟಿಕೆಯನ್ನು RV ತಾಂತ್ರಿಕ ಮಹಾವಿದ್ಯಾಲಯದ ತಂಡದಿಂದ ಸಿದ್ಧಪಡಿಸಿದೆ.

ತರಬೇತಿಯು ಈ ಕೆಳಕಂಡ 7 ಮಾಡ್ಯೂಲ್‌ಗಳನ್ನು ಹೊಂದಿದೆ. ಪ್ರತಿ Module ಗಳ ಅವಧಿ ಸುಮಾರು 2 ಗಂಟೆಗಳಾಗಿದ್ದು, ಮೌಲ್ಯಮಾಪನಾ (Assessment) ಮತ್ತು ಪ್ರಮಾಣ ಪತ್ರ Certificate) ಹೊಂದಿದೆ.

1. Module 1 : ಶಾಲೆಗಳಲ್ಲಿ ಸಮತೆ ಮತ್ತು ಸಮನ್ವಯತೆಯ ಪರಿಚಯ
2. Module 2: ಸಮನ್ವಯತೆಯನ್ನು ಉತ್ತೇಜಿಸುವ ನೀತಿಗಳು: ಐತಿಹಾಸಿಕ ಸಂದರ್ಭ
3. Module 3: ಶಾಲೆಗಳಲ್ಲಿ ಸಮನ್ವಯತೆಯ ದೃಷ್ಟಿಕೋನಗಳು
4. Module 4: ಸಮನ್ವಯ ಶಾಲೆಗಳು ಮತ್ತು ತರಗತಿ ಕೊಠಡಿಗಳನ್ನು ಯೋಜಿಸುವುದು
5. Module 5: ಎಲ್ಲಾ ಕಲಿಕಾರ್ಥಿಗಳಿಗಾಗಿ ತರಗತಿಗಳನ್ನು ರಚಿಸುವುದು
6. Module 6: ಸಮನ್ವಯತೆಯನ್ನು ಉತ್ತೇಜಿಸಲು ತರಗತಿಯ ತಂತ್ರಗಳು
7. Module 7: ಸಮನ್ವಯತೆಗಾಗಿ ಬಹು-ಉಪಯುಕ್ತ ಕಲಿಕೆ ಸಂಪನ್ಮೂಲ ಕೇಂದ್ರಗಳು/ ಕಲಿಕಾ ಕೇಂದ್ರಗಳ ಪರಿಣಾಮಕಾರಿ ಬಳಕೆ

ಪ್ರಸಕ್ತ ಶಿಕ್ಷಕರಿಗೆ ಮತ್ತು ವಿಶೇಷ ಶಿಕ್ಷಕರಿಗೆ ಸಮನ್ವಯ ಶಿಕ್ಷಣ / ಒಳಗೊಳ್ಳುವ ಶಿಕ್ಷಣದ ಕುರಿತು ಇನ್ನೂ ಹೆಚ್ಚು ಅರ್ಥಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ನೀಡಲು ಮಾಡ್ಯೂಲ್‌ಗಳು ಅನುಕೂಲಕರವಾಗಿದೆ. ಸಿದ್ಧವಾಗಿರುವ ಮಾಡ್ಯೂಲ್‌ಗಳು ಕನ್ನಡ ಮತ್ತು ಆಂಗ್ಲಭಾಷೆಯಲ್ಲಿ ಲಭ್ಯವಿರುತ್ತದೆ. ಈ ಮಾಡ್ಯೂಲ್‌ಗಳನ್ನು

**DIKSHA portal** ನಲ್ಲಿ ಲಭ್ಯವಿದ್ದು, 01.01.2023 ರಿಂದ 15.03.2023 ರವರೆಗೆ ಇರಲಿದೆ. ರಾಜ್ಯದ ಎಲ್ಲಾ ಶಿಕ್ಷಕರು ಈ ಮಾಡ್ಯೂಲ್ ಸಹಕಾರದಿಂದ ತರಬೇತಿ ಪಡೆದುಕೊಳ್ಳಲು ತಿಳಿಸಿದೆ.

**ತರಬೇತಿಗೆ ಲಿಂಕ್ ಈ ಕೆಳಗಿನಂತಿದೆ.**

| Module No & Name | Course URL | Do ID | Batch Start Date | Batch End Date | Enrolment End Date | Batch ID |
|---|---|---|---|---|---|---|
| ಒಳಗೊಳ್ಳುವ ಶಿಕ್ಷಣ / ಸಮನ್ವಯ ಶಿಕ್ಷಣ | https://diksha.gov.in/explorecourse/course/do_313684588511461376180 | do_313684588511461376180 | 01-01-2023 | 15-03-2023 | 05-03-2023 | 0136946468784209923 |

ಸ.ಸ.ಕ/—

**ರಾಜ್ಯ ಯೋಜನಾ ನಿರ್ದೇಶಕರು,**
**ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.**

ಗೆ,
ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ರವರ ತುರ್ತು ಕ್ರಮಕ್ಕೆ.

ಪ್ರತಿ:

1. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಬನಶಂಕರಿ, ಬೆಂಗಳೂರು ರವರ ಮಾಹಿತಿಗೆ ಹಾಗೂ ಕ್ರಮಕ್ಕೆ.
2. ಶ್ರೀಮತಿ ನಮಿತಾ ರಾವ್, Education Consultant –UNICEF ರವರ ಮಾಹಿತಿಗೆ.
3. ಕಚೇರಿ ಪ್ರತಿ